ಸೆಲೆಬ್ರಿಟಿ

■ ಹನಿ

## ನಾಬ್ಸ್ ಎಂಬ ಮಾಂತ್ರಿಕ

ಬೀಜಿಂಗ್ಸ್ ಒಲಿಂಪಿಕ್ಸ್‌ನ ಹೊತ್ತಿಗೆ ಭಾರತದ ಹಾಕಿ ಕ್ಷೇತ್ರಕ್ಕೆ ಬರಸಿಡಿಲೇ ಹೊಡೆದಿತ್ತು. 80 ವರ್ಷಗಳ ಒಲಿಂಪಿಕ್ಸ್ ಇತಿಹಾಸದಲ್ಲೇ ಮೊದಲ ಬಾರಿಗೆ ಭಾರತ ಹಾಕಿ ತಂಡಕ್ಕೆ 'ನೋ ಎಂಟ್ರಿ' ಬೋರ್ಡ್ ತೋರಿಸಲಾಗಿತ್ತು. ಎಂಟು ಸಲ ಒಲಿಂಪಿಕ್ಸ್ ಹಾಕಿ ಚಾಂಪಿಯನ್ ಆಗಿದ್ದ ತಂಡವೊಂದು ತಲುಪಿದ್ದ ಅತ್ಯಂತ ದಯನೀಯ ಸ್ಥಿತಿ ಅದಾಗಿತ್ತು. ಈಗ ಕಳೆದ ವಾರ ಭಾರತ ತಂಡ ಅರ್ಹತಾ ಸುತ್ತಿನ ಹಲವು ಪಂದ್ಯಗಳಲ್ಲಿ ಆಟವಾಡಿ ಗೆದ್ದು ಲಂಡನ್ ಒಲಿಂಪಿಕ್ಸ್‌ಗೆ ಮತ್ತೆ ಪ್ರವೇಶ ಪಡೆದಿದೆ. ಇಡೀ ದೇಶ ಸಂಭ್ರಮದಿಂದ ಕುಣಿದಾಡಿ ತಂಡದ ಸಾಧನೆಯನ್ನು ಹಾಡಿ ಹೊಗಳಿದೆ. ಭಾರತ ತಂಡದ ಈ ಅದ್ಭುತ ಚೇತರಿಕೆಯ ಹಿಂದೆ ನಿಂತ ರೂವಾರಿ ತಂಡದ ಹೊಸ ಕೋಚ್ ಮಿಖಾಯಿಲ್ ಜಾಕ್ ನಾಬ್ಸ್.

ಕಳೆದ ವರ್ಷ ಜೂನ್‌ನಲ್ಲಿ ಆಸ್ಟ್ರೇಲಿಯಾದ ಮಿಖಾಯಿಲ್ ನಾಬ್ಸ್ ಅವರನ್ನು ಭಾರತದ ಕೋಚ್ ಆಗಿ ನೇಮಕ ಮಾಡಿದಾಗ ತಂಡ ಇಷ್ಟು ಬೇಗ ಚೇತರಿಸಬಹುದು ಎಂಬ ನಿರೀಕ್ಷೆ ಯಾರಲ್ಲೂ ಇರಲಿಲ್ಲ. 57ರ ಹರೆಯದ ನಾಬ್ಸ್ (ಬರ್ತ್‌ಡೇ 4-1-1954) ತಿಂಗಳಿಗೆ 10 ಸಾವಿರ ಆಸ್ಟ್ರೇಲಿಯನ್ ಡಾಲರ್ ಸಂಬಳದ ಒಪ್ಪಂದದ ಜತೆಗೆ ತಮ್ಮೂರಿಂದಲೇ ಇಬ್ಬರು ಸಹಾಯಕರನ್ನೂ ಕರೆದುಕೊಂಡು ಬಂದರು. ಇಲ್ಲಿನ ಹಿರಿಯ ಆಟಗಾರರ ನೆರವೂ ಇತ್ತು. ಐದು ವರ್ಷದ ಅವರ ಕಾಂಟ್ರಾಕ್ಟ್‌ನಲ್ಲಿ ಅವರಿಗೆ ನೀಡಲಾಗಿದ್ದ ಗುರಿ ಲಂಡನ್ ಒಲಿಂಪಿಕ್ಸ್‌ಗೆ ತಂಡ



ಅರ್ಹತೆ ಪಡೆಯುವಂತೆ ಮಾಡುವುದು ಮತ್ತು 2016ರ ರಿಯೊ ಡಿ ಜನೈರೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವಂತೆ ಮಾಡುವುದು. ಈಗ ಲಂಡನ್‌ಗೆ ಅರ್ಹತೆ ಸಿಕ್ಕಿದೆ. ಈಗಿನ ಆಟ ನೋಡಿದರೆ ಭಾರತ ತಂಡ ಲಂಡನ್‌ನಲ್ಲಿಯೇ ಸ್ವರ್ಣ ಗೆಲ್ಲುವ ಕನಸೂ ಚಿಗುರಿದೆ. ಲಂಡನ್ ಒಲಿಂಪಿಕ್ಸ್ ಪ್ರವೇಶದ ಜತೆಗೆ ಒಪ್ಪಂದದಂತೆ ನಾಬ್ಸ್ ಸಂಬಳ ಮತ್ತೆ ಒಂದು ಸಾವಿರ ಡಾಲರ್ ಏರಿಕೆಯಾಗಿದೆ.

ಮಿಖಾಯಿಲ್ ನಾಬ್ಸ್ ಅವರದ್ದು 20 ವರ್ಷಗಳ ಅಂತರರಾಷ್ಟ್ರೀಯ ಹಾಕಿ ಅನುಭವ. 84ರ ಸಮ್ಮರ್ ಒಲಿಂಪಿಕ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡದಲ್ಲಿ ಆಟವಾಡಿದವರು ಅವರು. 'ಆಗ ನಮಗೆ ಭಾರತೀಯ ಕೋಚ್ ಇದ್ದರು. ಭಾರತೀಯ ಶೈಲಿಯಲ್ಲೇ (5-3-2) ಆಟವಾಡುತ್ತಿದ್ದೆವು. ಆಸ್ಟ್ರೇಲಿಯಾದ ವೇಗ ಮತ್ತು ಭಾರತೀಯ ಶೈಲಿಯ ಕೌಶಲ್ಯ ಎರಡೂ ನನಗೆ ಗೊತ್ತು' ಎಂದು ಕೋಚ್ ಆಗಿ ನೇಮಕವಾದ ಆರಂಭದಲ್ಲಿ ನಾಬ್ಸ್ ಹೇಳಿದ್ದರು. ಅದೀಗ ನಿಜವಾಗಿದೆ. ಭಾರತದ ಹಾಕಿ ರಂಗದಲ್ಲಿ ಮತ್ತೆ ಸಂಭ್ರಮ ಚಿಗುರೊಡೆದಿದೆ.



## ಮೆರಿಲ್ ಸ್ಟ್ರೀಪ್

70ರ ದಶಕದ ಕೊನೆಯ ಮಾತು. 'ಕಿಂಗ್‌ಕಾಂಗ್' ಸಿನಿಮಾದ 'ಆಡಿಷನ್' ನಡೆದಿತ್ತು. ಹೀರೋಯಿನ್ ಪಾತ್ರಕ್ಕೆ ಆಯ್ಕೆ ಮಾಡುತ್ತಿದ್ದರು. ನಿರ್ದೇಶಕ ಡಿ ಲಾರೆಂಟಿಸ್ ಮುಂದೆ ಅಮೆರಿಕನ್ ಯುವತಿಯೊಬ್ಬಳು ನಿಂತಳು. ಹೇಗೆ ಅಳೆದು ಸುರಿದು ನೋಡಿದರೂ ನಿರ್ದೇಶಕನಿಗೆ ಸಮಾಧಾನವೇ ಆಗಲಿಲ್ಲ. ಆಕೆಯನ್ನು ಕರೆದುಕೊಂಡು ಬಂದಿದ್ದು ನಿರ್ದೇಶಕನ ಮಗ. ಡಿ ಲಾರೆಂಟಿಸ್ ಮಗನನ್ನು ಪಕ್ಕಕ್ಕೆ ಕರೆದು ಆಕೆಯ ಮುಂದೆಯೇ ಇಟಾಲಿಯನ್ ಭಾಷೆಯಲ್ಲಿ ಉಗಿದ– 'ಇದನ್ನು ಎಲ್ಲಿಂದ ಕರೆದುಕೊಂಡು ಬಂದೆಯೋ ಮಗನೇ. ಹೆಂಗಪ್ಪ ಈಕೆಯನ್ನು ಹೀರೋಯಿನ್ ಮಾಡೋದು? ತೀರಾ ಕುರೂಪಿ..!' ತಕ್ಷಣ ಆ ಯುವತಿ ಸ್ಪಷ್ಟ ಇಟಾಲಿಯನ್ ಭಾಷೆಯಲ್ಲೇ ಮಾತನಾಡತೊಡಗಿದಳು! ನಿರ್ದೇಶಕ ಅವಾಕ್ಕಾದ.

–ಆಕೆ ಮೆರಿಲ್ ಸ್ಟ್ರೀಪ್. (ಬರ್ತ್‌ಡೇ 22-6-1949). ಕಳೆದ ವಾರ ಹಾಲಿವುಡ್‌ನಲ್ಲಿ ನಡೆದ ಆಸ್ಕರ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಆಕೆ ಮೂರನೇ ಬಾರಿಗೆ 'ಅತ್ಯುತ್ತಮ ನಟಿ' ಆಸ್ಕರ್ ಪ್ರಶಸ್ತಿ ಗೆದ್ದು ಹೆಮ್ಮೆಯ ನಗೆ ಬೀರಿ ನಿಂತಿದ್ದಳು. ಹೌದು, ಅದು ಆಕೆಯ ಮೂರನೇ ಆಸ್ಕರ್. 2011ರ 'ದಿ ಐರನ್ ಲೇಡಿ' ಎಂಬ ಸಿನಿಮಾದಲ್ಲಿ ಬ್ರಿಟನ್‌ನ ಮಾಜಿ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಪಾತ್ರ ನಿರ್ವಹಿಸಿ ಅತ್ಯುತ್ತಮ ಪ್ರದರ್ಶನ ತೋರಿದ ಮೆರಿಲ್ ಸ್ಟ್ರೀಪ್, ಜಾಗತಿಕ ಚಿತ್ರರಂಗದಲ್ಲಿ ತನಗೆ ಸರಿಸಾಟಿ ಯಾರೂ ಇಲ್ಲ ಎಂದು ಬೀಗುವುದಕ್ಕೆ ಇನ್ನೇನು ಬೇಕು?

ಮೆರಿಲ್ ಸ್ಟ್ರೀಪ್ ಇಷ್ಟು ದೊಡ್ಡ ಸಾಧನೆಯನ್ನು ಮಾಡಬೇಕೆಂದರೆ ಹಾದಿ ಸುಲಭವಿರಲಿಲ್ಲ. ಆರಂಭದಲ್ಲಿ ಯಾರೂ ಕರೆದು ಅವಕಾಶ ಕೊಡಲಿಲ್ಲ. ಅವಕಾಶ ಹುಡುಕಿಕೊಂಡು ಹೋದರೂ ಅದೃಷ್ಟ ಜತೆಗೆ ಬರಲಿಲ್ಲ. ರಂಗಭೂಮಿಯಲ್ಲಿ ತೊಡಗಿಸಿಕೊಂಡ ಆಕೆ 1971ರಲ್ಲಿ ನಟಿಸಿದ 'ಎ ಪ್ಲೇಬಾಯ್ ಆಫ್ ಸೆವಿಲ್' ನಾಟಕ ಜನಪ್ರಿಯಗೊಂಡಿತು. ನಾಲ್ಕೈದು ವರ್ಷಗಳ ಕಾಲ ರಂಗಭೂಮಿಯಲ್ಲಿ ತೊಡಗಿದ ಬಳಿಕ 77ರಲ್ಲಿ ಮೊದಲ ಬಾರಿಗೆ ಜೂಲಿಯಾ ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ರಂಗಭೂಮಿ, ಟೀವಿ, ಸಿನಿಮಾ– ಹೀಗೆ ಮೂರೂ ಕಡೆ ತೊಡಗಿಸಿಕೊಂಡ ಮೆರಿಲ್ ಸ್ಟ್ರೀಪ್ ಹಾಲಿವುಡ್‌ನಲ್ಲಿ ಒಂದೊಂದೇ ಮೆಟ್ಟಿಲುಗಳನ್ನು ಹತ್ತಿ ಮೇಲೇರಿದರು. ಕ್ರೇಮರ್ ವರ್ಸಸ್ ಕ್ರೇಮರ್ ಮತ್ತು ದಿ ಡೀರ್ ಹಂಟರ್ ಚಿತ್ರಗಳ ನಟನೆಗೆ ಸತತವಾಗಿ ಎರಡು ವರ್ಷ ಆಸ್ಕರ್ ಗೆದ್ದ ಮೆರಿಲ್, ಮ್ಯಾನ್‌ಹಟನ್ ಮತ್ತು ದಿ ಸೆಡಕ್ಷನ್ ಆಫ್ ಜೋ ಟೈನನ್‌ನಲ್ಲಿ ಸ್ಮರಣಾರ್ಹ ಅಭಿನಯ ನೀಡಿದರು. 17 ಸಲ ಅಕಾಡೆಮಿ (ಆಸ್ಕರ್) ಪ್ರಶಸ್ತಿಗೆ ನಾಮಿನೇಶನ್ ಆಗಿ ಮೂರು ಸಲ ಗೆದ್ದದ್ದು, 26 ಸಲ ಗೋಲ್ಡನ್ ಗ್ಲೋಬ್ ಪ್ರಶಸ್ತಿಗೆ ನಾಮಿನೇಶನ್ ಆಗಿ 8 ಸಲ ಗೆದ್ದದ್ದು ಈಕೆಯನ್ನು ಜಾಗತಿಕ ಶ್ರೇಷ್ಠರ ಸಾಲಿನಲ್ಲಿ ತಂದು ನಿಲ್ಲಿಸಿದೆ.

ನಟನೆಯ ವಿಷಯ ಬಂದರೆ ಮೆರಿಲ್ ಜಗಳಗಂಟಿಯೇ. ವೂಡಿ ಆಲನ್ ಜತೆಗೂ ಜಗಳ ನಡೆಸಿ ಚಿತ್ರಕಥೆಯಲ್ಲಿ ಬದಲಾವಣೆ ಮಾಡಿಸಿದ ಗಟ್ಟಿಗಿತ್ತಿ. ಇಂಗ್ಲಿಷ್ ಮಾತ್ರವಲ್ಲ ಹಲವು ಪ್ರಾದೇಶಿಕ ಭಾಷೆಗಳಲ್ಲೂ ಪಳಗಿರುವ ಈಕೆ ಸಂಭಾಷಣೆಯಲ್ಲಿ ಸ್ಥಳೀಯ ಉಚ್ಚಾರಕ್ಕೆ ನೀಡುವ ಒತ್ತು ಎಲ್ಲ ನಿರ್ದೇಶಕರ ಮನಸ್ಸು ಗೆದ್ದ ಸಂಗತಿ. ಗಂಡ ಜಾನ್ ಕ್ಯಾಸೆಲ್ ಕ್ಯಾನ್ಸರ್‌ನಿಂದ ತೊಂದರೆ ಅನುಭವಿಸಿದಾಗ ಜತೆಗೇ ಇದ್ದ ಮೆರಿಲ್, ಗಂಡನ ಸಾವಿನ ಬಳಿಕ ಡಾನ್ ಗುಮ್ಮರ್‌ನನ್ನು ಮದುವೆಯಾಗಿ ನಾಲ್ಕು ಮಕ್ಕಳ ತಾಯಿಯೂ ಆಗಿದ್ದಾಳೆ. ಸದ್ಯಕ್ಕಂತೂ ಈಕೆ ಹಾಲಿವುಡ್‌ನ ಸರ್ವಶ್ರೇಷ್ಠರ ಪಟ್ಟಿಯಲ್ಲಿ ಅಗ್ರಗಣ್ಯೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65